ಜಯನಗರ ಗೃಹ ನಿರ್ಮಾಣ ಸಹಕಾರಿ ಸಂಘದಲ್ಲಿ ಸದಸ್ಯರನ್ನು ನೋಂದಾಯಿಸುವ ಬಗ್ಗೆ.

1793. ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಯನಗರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಕಳೆದ ಮೂರು ವರ್ಷಗಲ್ಲಿ ನೋಂದಾಯಿಸಲಾಗಿರುವ ಸದಸ್ಯರ ಸಂಖ್ಯೆ ಎಷ್ಟು (ವರ್ಷಾವಾರು ವಿವರಗಳನ್ನು ನೀಡುವುದು) :

ಆ) ಸದರಿ ಅವಧಿಯಲ್ಲಿ ಎಷ್ಟು ಮಂದಿ ಸದಸ್ಯರಿಗೆ ನಿವೇಶನಗಳನ್ನು ಪಂಚಲಾಗಿದೆ (ವರ್ಷಾವಾರು ವಿವರಗಳನ್ನು ನೀಡುವುದು) :

ಇ) 1991-92ರಲ್ಲಿ ಸಂಘದಲ್ಲಿ ಸದಸ್ಯರಾಗಿರುವವರನ್ನು 1989-90ರಲ್ಲಿ ಸದಸ್ಯರಾಗಿರುವುದಾಗಿ ಪರಿಗಣಿಸಿ ನಿವೇಶನ ನೀಡಲು ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಈ) ಹಾಗಿದ್ದಲ್ಲಿ ಈ ಬಗ್ಗೆ ವಿಚಾರಣೆ ನಡೆಸಿ ಅಂತಹ ಕೃತ್ಯಗಳಲ್ಲಿ ಭಾಗಿಗಳಾಗಿರುವ ಸದಸ್ಯರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಸಂಘವು ನೋಂದಣಿ ಮಾಡಿಕೊಂಡಿರುವ ಸದಸ್ಯರುಗಳ ವಿವರಗಳು ಈ ಕೆಳಕಂಡಂತೆ ಇವೆ.

1)	1988-89	209
2)	1989-90	188
3)	1990-91	233
4)	1991-92 (ದಿನಾಂಕ 27-2-92 ರವರೆಗೆ)	167
	ಒಟ್ಟು	797

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಂಘವು ತನ್ನ ಸದಸ್ಯರುಗಳಿಗೆ ನೀಡಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ.

1)	1988-89	ಇಲ್ಲ
2)	1989-90	73
3)	1990-91	ಇಲ್ಲ
4)	1991-92	ಇಲ್ಲ

ಇ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.